ಸತ್ಯಮಾರ್ಗಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 210] ಮಂಗಳವಾರ 27—7—48 [ಬಿಡಿ ಪ್ರತಿ 3 ಪೈ

ಮಧ್ಯ ಭಾರತ ಸರ್ಕಾರದ ವತಿಯಿಂದ ಪಠಾರಿ ಸಂಸ್ಥಾನವನ್ನು ವಶ ಪಡಿಸಿಕೊಳ್ಳಲು ಹೋದಾಗ ಅಲ್ಲಿಯ ಸರ್ಕಾರಿ ಟ್ರೆಜರಿಯಲ್ಲಿ ಒಂದು ಪೈ ಸಹ ಇರಲಿಲ್ಲೆಂದು ತಿಳಿದುಬಂದಿದೆ

ಆದರೆ ಪಠಾರಿ ನವಾಬರು 28 ಸಾವಿರ ರೂಪಾಯಿ ಸಾಲ ತೀರಿಸುವ ಹೊಣೆಯನ್ನು ಮಧ್ಯಭಾರತ ಸರ್ಕಾರದ ಮೇಲೆ ಹೇರಿದ್ದಾರೆ (ನ)

ಅತ್ಯಾಚಾರ

ತುರುವೇಕೆರೆಯಲ್ಲಿ ಒಬ್ಬ ಮಡಿವಾಳಿ ಹೆಂಗಸಿನ ಮೇಲೆ ಅತ್ಯಾಚಾರ ಮಾಡಲು ಕಾರ್ಯಾತುರದಿಂದ ಕೂಡಿದ್ದ ಎ. ಎಂ. ಸಿ. ಸಿ. ಮೆಂಬರು, ಪತ್ರಿಕಾ ಪ್ರತಿನಿಧಿಯೂ ಆದ ಶ್ರೀ ರಾಮು ಪುರಾಣಿಕರೆಂಬುವರನ್ನು ಪುರ ಜನರೂ ಪೋಲೀಸರೂ ಹಿಡಿದು ಹಾಕಿದ್ದರೆಂದು ಪ್ರಕಟವಾಗಿತ್ತಷ್ಟೆ ಈಗ ಸ್ಥಳೀಯ ಇನ್ಸ್‌ಪೆಕ್ಟರು ಈ ಕೇಸನ್ನು ತಿಪಟೂರು ಮ್ಯಾ॥ ಕೋರ್ಟಿನಲ್ಲಿ ಛಾರ್ಜ್‌ಷೀಟ್ ಹಾಕಿರುತ್ತಾರೆಂದು ತಿಳಿದುಬಂದಿದೆ.(ನ)

ಸಾವರಕರಿಗೆ ಇನ್ನೊಬ್ಬ ವಕೀಲ್

ಕಲ್ಕತ್ತ, ತಾ॥ 21—ಕಲ್ಕತ್ತೆಯ ಪ್ರಮುಖ ಬಾರಿಷ್ಟರಾದ ಶ್ರೀ। ಜ್ಯೋತಿಪ್ರಕಾಶ ಮಿಶ್ರರು ಗಾಂಧಿ ಕೊಲೆ ಕೇಸಿನಲ್ಲಿಯ ಬಾ॥ ಸಾವರಕರರ ಪರವಾಗಿ ವಾದಿಸಲು ದಿಲ್ಲಿಗೆ ಹೊರಟ್ಟಾಗಿದೆ.

ಸ್ಥಿರಲಂಚಂ ವಸೂಲು

ಮದ್ರಾಸ್ ಜು. 22—ಕೋಕಿಲ ಗಾನ ಶ್ರೀಮತಿ ಎಂ. ಎಸ್. ಸುಬ್ಬಲಕ್ಷ್ಮಿಯವರ ಸಂಗೀತ ಕಛೇರಿಗೆ ಪಂ॥ ನೆಹರು ಭೇಟಿ ಇತ್ತಿದ್ದರು. ಮದರಾಸಿನಲ್ಲಿ ಕ್ಷಯಾಸ್ಪತ್ರೆ ನಿರ್ಮಾಣ ಬಗೆಗೆ ಅಲ್ಲಿ ವಸೂಲಾದ ರೂ. 38080 ಗಳನ್ನು ಚೆಕ್ಕಿನ ರೂಪದಲ್ಲಿ ಶ್ರೀ ಗಂಧದ ಕರಂಡಕದಲ್ಲಿಟ್ಟು ಪಂ॥ ನೆಹರು ಹಸ್ತಕ್ಕೆ ಕೊಡಲಾಯಿತು.

ಪ್ರೆಡ್ ಲ್ಯಾಂಡ್ಸ್

26—7—48 ರಿಂದ

ಹುಸ್ನೆಬಾನೊ — ಯಶ್ವಂತ ದಾವೆ

ಪಾತ್ರವಹಿಸಿರುವ

ರಾಯಲ್ ಮೇಲ್

[ನೋಡಲೇಬೇಕಾದ ಹಿಂದಿ ಚಿತ್ರ]

ಪ್ರತಿದಿನ 3 ಆಟಗಳು

30 ನೇ ವರ್ಧಂತಿ

ಮಹಾರಾಜರು ಚಿರಾಯುವಾಗಿರಲಿ

ಶ್ರೀಮನ್ಮಹಾರಾಜ ಶ್ರೀ ಜಯ ಚಾಮರಾಜ ಒಡೆಯರ್ ಬಹದ್ದೂರ್‌ರವರ ವರ್ಧಂತ್ಯುತ್ಸವ ಬೆಳಿಗ್ಗೆ ಶಾಸ್ತ್ರೋಕ್ತವಾಗಿ ಅರಮನೆಯಲ್ಲಿ ಆರಂಭವಾಯ್ತು. ವೈಭವವಾದ ದರ್ಬಾರ್ ನಡೆಯಿತು.

ಈ ವರ್ಧಂತ್ಯುತ್ಸವ ಮಹಾ ವೈಭವಯುತವಾದದ್ದು. ಸ್ವತಂತ್ರ ಭಾರತದಲ್ಲಿ ಪ್ರಭುಗಳ ಪ್ರಪ್ರಥಮ ವರ್ಧಂತ್ಯುತ್ಸವವಿದು. ಪ್ರಭುಗಳು ಜವಾಬ್ದಾರಿ ಸರ್ಕಾರ ಕರುಣಿಸಿದ ನಂತರ ಜರುಗುತ್ತಿರುವ ಪ್ರಥಮ ಮಹೋತ್ಸವವಿದು.

ಇಡೀ ದೇಶವೇ ಆನಂದಮಯವಾಗಿದೆ.

ವರ್ತಮಾನ ಸಂಗ್ರಹ

ಕಾಶ್ಮೀರ ಕದನ ಅಂತ್ಯ ಘಟ್ಟಕ್ಕೆ ಬಂದಿದೆಯೆಂದು ಶ್ರೀ ಷೇಕ್ ಅಬ್ದುಲ್ಲ ತಿಳಿಸಿದ್ದಾರೆ

ಸಿಡ್ನಿ ಕಾರ್ಟ್‌ನ್ಸರಿಗೆ ಇತ್ತಿದ್ದ ಲೈಸನ್ಸ್ ರದ್ದು ಮಾಡಲು ಪಾಕಿಸ್ಥಾನ ನಿರ್ಧರಿಸಿದೆ.

ಹೈದರಾಬಾದ್ ಭಾರತಕ್ಕೆ ಸೇರದಿದ್ದರೆ ಆ ಸಂಸ್ಥಾನ ನಿರ್ಮೂಲವಾಗುವುದೆಂದು ಪಂ॥ ನೆಹರು ಮದ್ರಾಸಿನಲ್ಲಿ ಹೇಳಿದ್ದಾರೆ.

ಪಂ ॥ ನೆಹರು ಕಲ್ಕೈಕುಡಿಯಲ್ಲಿ ಶಂಕುಸ್ಥಾಪನೆ ನಡಿಸಿದ ಎಲೊಕ್ಟ್ರೋ ಕೆಮಿಕಲ್ ಸಂಶೋಧನಾಲಯಕ್ಕೆ ಡಾ॥ ಅಲಗಪ್ಪ ಚೆಟ್ಟಿಯಾರರು ರೂ. 15 ಲಕ್ಷ ಉದಾರ ದಾನವಿತ್ತಿದ್ದಾರೆ.

ಕಾರೈಕುಡಿ ಜು. 25—ಜವಾಹರಲಾಲ್ ನೆಹರುರವರಿಗೆ ತಮ್ಮ ಜ್ಞಾಪಕಾರ್ಥವಾಗಿ ಡಾ॥ ಅಲಗಪ್ಪ ಚೆಟ್ಟಿಯಾರರು ದುತದಲ್ಲಿ ಗಾಂಧೀಜೀ ಚಿತ್ರವನ್ನು ಕೆತ್ತಿರುವ ಹೂಜಿಯನ್ನು ಅರ್ಪಿಸಿದ್ದಾರೆ.

ಸುದ್ದಿಗಳು

ಮೈಸೂರು ಕಾಂಗ್ರೆಸ್ ಮಾಜೀ ಅಧ್ಯಕ್ಷ ಶ್ರೀ ಟಿ. ಸುಬ್ರಹ್ಮಣ್ಯಂರವರು ತುಮಕೂರು ನಗರ ಕಾಂಗ್ರೆಸ್ ಸಮಿತಿ ಚುನಾವಣೆಯಲ್ಲಿ ಪರಾಜಿತರಾಗಿದ್ದಾರೆ.

ಪ್ರೊ॥ ಭನ್ಸಾಲಿ ಹೈದರಾಬಾದ್ ಸ್ವವಾಸ ಮಾಡುವರೆಂದು ಖಚಿತ ವರದಿ ಒಂದಿದೆ.

ಪ್ಯಾರಿಸ್‌ನಲ್ಲಿ ಸಮಾವೇಳಗೊಳ್ಳುವ ಪ್ರಪಂಚ ಸಂಸ್ಥೆ ಪರಿಷತ್ತಿನಲ್ಲಿ ಹೈದರಾಬಾದ್ ವಿಷಯ ಸೂಚಿಸುವ ಬಗ್ಗೆ ಬ್ರಿಟಿಷ್ ಮತ್ತು ಪಾಕಿಸ್ಥಾನಗಳ ಸಹಾಯ ಪಡೆಯಲು ಹೈದರಾಬಾದ್ ಯತ್ನಿಸುತ್ತಿದೆ.

ಹೈದರಾಬಾದ್—ಭಾರತ ಸಂಧಾನ ಬಗ್ಗೆ ಮಧ್ಯಸ್ಥಿಕೆ ವಹಿಸಲು ಸರ್ ವಿಜಾರ್ ಈ ದಿನ ಬೆಂಗಳೂರಿನಿಂದ ದೆಹಲಿಗೆ ವಿಮಾನದಲ್ಲಿ ಹಾರಿದರು.

ಇಗ್ಲೆಂಡಿಗೆ 23 ಲಕ್ಷ ಡಾಲರುಗಳ ಸಾಲವನ್ನು ಕೊಡಲು ಅಮೆರಿಕವು

ದೆಹಲಿ ಕ
ಕೊಲೆ ಸಂಬ
ದಿವಸ ರಕ್ಕ ಕ
ದಾಗ, ತನ್ನ ಜೀ
ದಾಗಿ ಅನಾಮಧೇ
ಬಂದಿದೆ ಎಂದು ವಿಶೇ
ರಾದ ಶ್ರೀ ಆತ್ಮ ಚರಣ
ನದಲ್ಲಿ ಬಹಿರಂಗ ಪಡಿ

ನಿಜಾಂರ ಪತ್ರ ಸೇರಿತ

ಲಂಡನ್ ಜು. 25—ಸಂ
ಮಾಂಕ್ಟನ್ ಅವ್ಯ ಕಾರ್ಯದ
ರಿಜರ್ವ್ ಬ್ಯೂಮೌಂಟ್ ರಕ್ಷ
ಢಿಹಲಿಯಿಂದ ಹೈದರಾಬಾದ್
ರಿಂದ ಎಂದು ನಂಬಲಾಗಿರುವ
ವಿಮಾನದಲ್ಲಿ ಈ ರಾತ್ರಿ ಇ
ತಲಪಿತು.

ನವದೆಹಲಿ ವಿಮಾನ ನಿಲ್ದಾಣ
ಆ ಪತ್ರ ನೋಡಲಾಯಿತೇ ಎ
ಕೇಳಲಾಗಿ, ವಿ। ಬ್ಯೂಮೌಂಟರು
ಕ್ಷಣ ನಾನೇನೂ ಹೇಳಲಾರೆ. ಅಲ್ಲಿ
ದು ಘಟನೆ ಜರುಗಿತು ಎಂದಿದ್ದಾ

ಪತ್ರಿಕಾ ಸ್ವಾತಂತ್ರ್ಯ

ಬೊಂಬಾಯಿ ಜು 25—ಈ ದಿನ ಸಾಯಂಕಾಲ ಮುಕ್ತಾಯ ಗೊಂಡ ಅಖಿಲ ಭಾರತ ಪತ್ರಿಕಾ ಸಂಪಾದಕರ ಗಳ ಪರಿಷತ್ತಿನಲ್ಲಿ ಹಲವು ಪ್ರಾಂತ್ಯಗಳಲ್ಲಿ ಸಾರ್ವಜನಿಕ ಸಂರಕ್ಷಣಾ ಶಾಸನವನ್ನು ಮುಂದುವರಿಸುತ್ತಿರುವುದು ಸಮಂಜಸವಾದುದಲ್ಲ ; ಪತ್ರಿಕೆಗಳ ಹಕ್ಕುಭಾದ್ಯತೆಗಳಿಗೆ ಧಕ್ಕೆ ತರುವಂತಹ ಶಾಸನಗಳ ವಿಮರ್ಶೆಯಾಗಬೇಕು ಎಂಬ ಕೇಳಿಕೆಗಳು, ಬಂದವು.

ರಾಜರ ಮಧ್ಯಸ್ಥಿಕೆಗೆ ಆಹ್ವಾನ

ನವದೆಹಲಿ ಜು. 26—ಇಂಗ್ಲೆಂಡಿಗೆ ತೆರಳಲು ಹೈದರಾಬಾದಿನಿಂದ ಇಂಗ್ಲೆಂಡಿಗೆ ತೆರಳುತ್ತಿದ್ದ ಮಾಂಕ್ಟನ್ನರ ಕಾರ್ಯದರ್ಶಿ ಬ್ಯೂಮೌಂಟ್ ಬಳಿ ಎರಡು ಪತ್ರಗಳು ದೊರೆತವು. ಒಂದು ಪತ್ರ ಬ್ರಿಟಿಷ್ ಚಕ್ರವರ್ತಿಗೆ ಹೈದರಾಬಾದ್ ಪ್ರತಿನಿಧಿಯ ಕಲಹದ ಬಗ್ಗೆ ಮಧ್ಯಸ್ಥಿಕೆ ವಹಿಸಬೇಕು ಎಂದು ಬರೆಯಲ್ಪಟ್ಟಿದೆಯಂತೆ. ಮತ್ತೊಂದು ಪತ್ರ ಮಾಂಕ್ಟನ್ನರಿಗೆ

ದ್ದಾರೆ ಮತ್ತು ಅವರ ದಿಕ್ಕೆತೆಗಳನ್ನು ಪರಿಗಣಿಸಿ ಬಡಿ, ಕೊಡ ಬೇಕು. ಪ್ರೊಬೇಷನರುಗಳನ್ನು ನೇಮಿಸಿಕೊಂಡು ಬರುತ್ತಿರುವುದು ಅಶೋಕ ಚಕ್ರವರ್ತಿ ಕಾಲದಿಂದಲೂ ನಡೆದು ಬರುತ್ತಿದೆ. ಆ ಪದ್ಧತಿ ಈಗಲೂ ಹೋಗುವ ಸೂಚನೆ ಇಲ್ಲ. ಮತ್ತೆರಡು ವಾರಗಳಲ್ಲಿಯೇ ರೆವಿನ್ಯೂ ಇನ್‌ಸ್ಪೆಕ್ಟರುಗಳ ಬಗ್ಗೆ, ಸರ್ಕಾರಿ ಪ್ರಕಟಣೆ ಬರುವುದು ಕಡೇ ಪಕ್ಷ ಬೆಂಗಳೂರಿನಲ್ಲಿಯಾದರೂ ಸರ್ಕಾರೀ ನೌಕರರಿಗೆ ಮನೆ ಒದಗಿಸಲಾಗುವುದೆಂದು ನಂಬುತ್ತೇನೆ, ನಿಮ್ಮ ಬೇಡಿಕೆಗಳೆಲ್ಲಾ ಪೂರೈಸಲ್ಪಡಲಿ ಎಂದು ತಿಳಿಸಿದರು.

ಸಮ್ಮೇಳನಕ್ಕೆ ಯಶಸ್ವಿ ಕೋರಿ ಸರ್, ಎಂ. ವಿಶ್ವೇಶ್ವರಯ್ಯನವರು, ಜಿ|| ಎಂ. ಜಿ. ಮೇಖ್ರಿ, ಡಾ|| ಸುಬ್ರಾಯಸ್, ಶ್ರೀ ಪಿ.ಜಿ. ಡಿಸೌ ಜಿ|| ಮು|| ಶ್ರೀ ಮಾಧವರಾವ್, ಶ್ರೀ ಬಿ ಜಿ ಬೇರ್ ಮತ್ತು ಶ್ರೀ ಹೆಚ್ ಸಿ ದಾಸಪ್ಪನವರು ಸಂದೇಶಗಳನ್ನು ಕಳುಹಿಸಿದ್ದರು ಶ್ರೀ ರಾಮಾನುಜರವರು ಅವುಗಳನ್ನು ಪಠಿಸಿದರು

ಶ್ರೀ ಧರ್ಮಲಿಂಗಂ ವಂದನಾರ್ಪಣೆ ಮಾಡಿದರು

ಟ್ರೇಕಮಿಟಿ

ವಾಷಿಂಗ್ಟನ್ ಜುಲೈ. 16—ಸಂಯುಕ್ತ ಟ್ರೇಕಮಿಟಿಯವರು ಈ ವರ್ಷದ ಎಂಡನೇ ಅರುತಿಂಗಳಿಗೆ ಇಂಡಿಯಾ ದೇಶಕ್ಕೆ 2135 ಟ್ರೇಗಳ ಟಿನ್ನನ್ನು ಒದಗಿಸಲು ನಿರ್ಧರಿಸಿರುವರು ಇಂಡಿಯಾ ದೇಶಕ್ಕಿಂತ ಹೆಚ್ಚಾಗಿ ಟ್ರೇ ಪಡೆಯುವ ದೇಶಗಳು ಯಾವುವೆಂದರೆ—ಸಂಯುಕ್ತ ಅಮೆರಿಕ 16,640 ಟ್ರೇಗಳು ಮತ್ತು ಫ್ರಾನ್ಸು 4290 ಟ್ರೇಗಳು.

At Opera

24—7—48 ರಿಂದ

ಕಿಸ್ಮತ್ ವಾಲಿ

[ಹಿಂದಿ]

ನಾಡಿಯ ಜಾರ್ ಕವಾಸ್ ಸಯಾನಿ ರಾನಿಬಾಲ ಪಾತ್ರವಹಿಸಿರುವರು

.... ಪ್ರತಿದಿನ 3 ಆಟಗಳು ....

Edited, Printed and Published by M S Krishna Rao at the Satyavadi Press, Chamaraj

ಷ್ಟ ನ್ಯಾಯಾಸ್ಥಾನದ ಪ್ರಧಾನ ನ್ಯಾಧೀಶರಾದ ನ್ಯಾ|| ಶ್ರೀ ಪರಮ ಯ್ಯನವರು, ಕಾಮಗಾರಿ ಸಚಿವ ಶ್ರೀ ಎಸ್. ಸಿದ್ಧಯ್ಯನವರು ಮತ್ತು ವಿದ್ಯಾಮಂತ್ರಿ ಶ್ರೀ ಡಿ. ಹೆಚ್ ಶಂಕರೇಗೌಡರಯ್ಯನವರು ದಿವಾಣ ಸಾಹೇಬರವರ ಅಕ್ಕ ಪಕ್ಕಗಳಲ್ಲಿ ಮಂಡಿಸಿದ್ದರು. ಅನೇಕ ಅಧಿಕಾರಿಗಳು ವೇದಿಕೆಯ ಮೇಲೆ ಮಂಡಿಸಿದ್ದರು

ಪುಟ್ಟಣ್ಣ ಚೆಟ್ಟರ ಪುರಭವನ ಸಭಾಂಗಣದಲ್ಲಿ ಸಮ್ಮೇಳನ ಪ್ರತಿನಿಧಿಗಳೂ, ಮೈಸನ ಸಭಾ ಸದಸ್ಯರುಗಳೂ, ಅಧಿಕಾರಿಗಳೂ ಮಂಡಿಸಿದ್ದರು. ಭವನದ ಅಪ್ಪರಿಗೆಯ ಮೇಲೆ ಪ್ರೇಕ್ಷಕರು ಅಸಂಖ್ಯಾತವಾಗಿ ಆಗಮಿಸಿದ್ದರು. ಸ್ವಾಗತ ಸಮಿತಿಯವರು ಅದಷ್ಟು ಮಟ್ಟಿಗೆ ಏರ್ಪಾಡುಗಳನ್ನು ಮಾಡಿದ್ದರು

ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಜಿ ನರಸಿಂಹಯ್ಯನವರು ಸ್ವಾಗತವನ್ನು ಕೋರುತ್ತಾ—

ಸಮ್ಮೇಳನ ಶಾಂತ ಮನೋಭಾವದಿಂದ ಜರುಗಲಿ ನಮ್ಮ ಕುಂದುಕೊರತೆಗಳನ್ನು ಸರ್ಕಾರದ ಮುಂದೆ ನೀವೇದಿಸೋಣ. ನಮ್ಮ ಆಹ್ವಾನವನ್ನಂಗೀಕರಿಸಿ ಬಂದವರೆಲ್ಲರಿಗೂ ವಂದನೆಗಳು, ತಿಳಿಸಿದರು.

ಸಮ್ಮೇಳನದ ಅರಂಭೋತ್ಸವವನ್ನು ನೆರವೇರಿಸುತ್ತಾ ಸಂಸ್ಥಾನದ ದಿವಾಣ ಸಾಹೇಬರವರು ಭಾಷಣ ಮಾಡುತ್ತಾ

ಉದ್ಯೋಗದ ಗೌರವ ಸೂಚನೆಯಾಗಿಯೇ ಸಮವಸ್ತ್ರ ಧರಿಸುವ ಪದ್ಧತಿಯಿರುವುದು. ಧರಿಸುವ ಉಡುಪಾಗಿರಬೇಕು. ಸರ್ಕಾರಿ

No. R8 Gl 809/47 Mysore 1948

Notification

The public are hereby informed that sealed tenders will be received in the office of the Municipal Commissioner Mysore City Municipality, up to 4 p, m. on 6th August 1948 for the right of occupying the pannels of the cement Advertisement Board put up by the Municipality in Jeevannarayana Kere (in front of Railway Offices). Further information may be had in the Municipal Office during office hours.

[Sd] T. Rama Rao
For Municipal Commissioner

SHAKTI SUDHA

A Superb TONIC

ಹೊಸ ಬೆಳೆಯು, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದು. ಸ್ಪೇನಿನ ಕೇಸರಿ ಗಿಡಗಳಲ್ಲಿಯು ಹೂಗಳಿಂದ ಆರಿಸಿ ತೆಗೆದುದಾಗಿದ. ನಮ್ಮಿಂದ ಸ್ಪೆಷಲ್ಲಾಗಿ ಅನುದು ಮಾಡಲ್ಪಟ್ಟಿರತಕ್ಕದ್ದು ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಅಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ. 1 ತೋಲಾ, 5 ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು